

ತಪ್ಪು ಮಾಡ್ದೆ ಅಂತಾ ಕಾಣುತ್ತೆ ಯವ್ವಾ. ನನ್ನ ಮಗನಿಂದ ನಮ್ಮ ಜನ ಸುಧಾರಿಸ್ತಾರೆ ಅಂತ ಕನಸು ಕಟ್ಟಿಕೊಂಡಿದ್ದೆ ಯವ್ವಾ, ಮಗ ಕೆಂಪ್ಗ ಚೆಂದಾಗಿದ್ದಿದ್ದೇ ತಪ್ಪಾ?, ಅವಳು ಮೇಲೋಣಿ ರಾಧಕ್ಕನೋರ ಮಗಳು ಪ್ರೀತಿಗೀತಿ ಅಂತ ನನ್ನ ಮಗಿಗೆ ತಲೆ ತುಂಬಿದ್ಲು. ಆಮ್ಯಾಕ ಬ್ಯಾರೆ ಮದುವೆ ಆಗಿ ಹೋದ್ಲು. ಮೊದಲ ನಿನ್ನ ಮದುವೆ ಆಗ್ತೀನಿ ಅಂತ ಹೇಳಿ ಹುಚ್ಚು ಹಿಡಿಸಿ ಅನ್ಯಾಯವಾಗಿ, ಬಂಗಾರದಂಥ ಮಗನ್ನ ಜೀವ ತಂಗೊಬಿಟ್ಲು ಯವ್ವಾ... ನನ್ನ ಬಂಗಾರದಂತಹ ಮಗನ್ನ ನನ್ನಿಂದ ಕಿತ್ತಕೊಂಡುಬಿಟ್ರು' ಎಂದು ರೊಯ್ಯನೆ ಅಳತೊಡಗಿದಳು.

'ಕೆಂಚಕ್ಕ... ಸಮಾಧಾನ ಮಾಡಿಕೋ. ಕೆಂಚಕ್ಕ, ದೇವ್ರು ತನ್ನ ಮ್ಯಾಲೆ ತಪ್ಪು ಹಾಕ್ಕೋಳೋದಿಲ್ಲ ಅಂತೀನಿ' ಎಂದೆ. ಕೆಂಚಕ್ಕ ಹೊಟ್ಟ್ಯಾಗಿನ ಮಾತು ಹೊರಗ ಹಾಕಾಕ ಶುರು ಮಾಡಿದ್ಲು. 'ನಮ್ಮ ಮಂದಿ ಯಾವಾಗ ಸುಧಾರಿಸ್ತಾರೋ ಸುಧಾರಿಸೋಕೆ ಮತ್ತೊಬ್ಬ ಬಸವಣ್ಣ ಬಾಬಾ, ಹುಟ್ಟಿ ಬರಬೇಕಾಗೇತಿ, ಹೊಳ್ಳಿ ಹುಟ್ಟಿ ಬರ್ರೀ ಅಂತಾ ಬೇಡಿಕೋತಿನಿ ಯವ್ವಾ' ಎಂದಳು.

ನಾನು, 'ಅಕ್ಕ ನೀನು ಕಂಪ್ಲೇಂಟ್ ಕೊಡಲಿಲ್ವಾ' ಎಂದು ಕೇಳಿದೆ.

'ನನ್ನಂಥ ದುಡಿಯೋ ಜನಗಳ ಕಂಪ್ಲೇಂಟ್ ಯಾರವ್ವ ತಗೋತಾರೇ. ಏನೇನೋ ಹೇಳಿ ಬೈಯ್ದು ಕಳಿಸಿಬಿಡ್ತಾರೆ. ಇಲ್ಲಾ ಕಾಸ್ ಬಿಚ್ಚು ಅಂತಾರೆ. ನಾ ಎಲ್ಲಿಂದ ತರ್ಲಿ ಯವ್ವಾ? ದುಡಿದ ಪಗಾರ ಕೊಡೋದೆ ಎರಡುಮೂರು ತಿಂಗಳಿಗೊಮ್ಮೆ, ಅಂತಾದ್ರಾಗೆ, ಆ ಸಮಯಕ್ಕ ದುಡ್ಡು ಎಲ್ಲಿರುತ್ತೆ ಕಣವ್ವ. ನನ್ನಂಥವರ ಬಾಳು ಹಿಂಗ ಮೂರಾಬಟ್ಟೆ ಆಗೋಗುತ್ತೆ. ಸತ್ತರೂ